# ಶೃಂಗಾರ ಮಂಟಪವಾದ ಮೌನಮಂಟಪ

‘ಏಕೆ ಋತು, ಏನೂ ಮಾತಾಡ್ತಿಲ್ಲ, ನಿನ್ನ ತಾಯಿಯ ಹಾಗೆ ನಿಂಗೂ ಶಾಕ್‌ನಿಂದ ಮಾತು ನಿಲ್ಲಲು ಇನ್ನೂ ಕೆಲವು ದಿನಗಳು ಬೇಕು, ಅಲ್ಲಿಯವರೆಗೆ ಮಾತಾಡು ಮಗಳೇ...’ ಪುರುಷೋತ್ತಮರ ಲೇವಡಿ ಮಾತಿನಿಂದ ಋತುವಿಗೆ ಕೋಪ ಉಕ್ಕಿತು.

‘ಪಪ್ಪ....ನೀವು ಇಂಥ ನೀಚರು ಅಂತ ನಾನು ನಿಜವಾಗ್ಲೂ ತಿಳಿದುಕೊಂಡಿರಲಿಲ್ಲ, ಯಾಕೆ ಇಷ್ಟು ದೊಡ್ಡ ನಾಟಕ ಮಾಡಿದ್ರಿ, ನನ್ನನ್ನು ನಮ್ಮಮ್ಮನಿಂದ ಯಾಕೆ ಬೇರೆ ಮಾಡಿದ್ರಿ?’ ಸಿಟ್ಟಿನಿಂದ ಕೇಳಿದಳು.

‘ನಾನು ನಾಟಕ ಮಾಡಿದ್ದಿರಲಿ, ನಾಟಕ ಮಾಡೋದ್ರಲ್ಲಿ ನೀನು ನನಗೇನೂ ಕಡಿಮೆ ಇಲ್ಲ ಬಿಡು, ಕಳೆದ ವಾರ ರಮ್ಯಾಳ ಜೊತೆ ನಂದಿಗೆ ಹೋಗಿ ಬಂದ್ಯಲ್ಲ, ಅಲ್ಲಿ ನಿಂಗೆ ತಿಳಿದ ಸತ್ಯ ಸಂಗತಿಗಳೇನು ಅಂತ ನಂಗೂ ಚೆನ್ನಾಗಿ ಗೊತ್ತಮ್ಮಾ, ಆ ಯೋಗ ಗುರು ಹರಿಕೃಷ್ಣ ನಿನ್ನ ನಿಜವಾದ ತಂದೆಯಾದ್ರೆ, ರಮ್ಯ ನಿನ್ನ ಒಡಹುಟ್ಟಿದ ಅವಳಿ ಸಹೋದರಿ, ಇಲ್ಲೀಗ ಅರೆಹುಚ್ಚಿಯಾಗಿ ಕುಳಿತಿರುವ ಈ ಹೇಮಲತಾಳೇ ನಿಮ್ಮಿಬ್ಬರಿಗೂ ನಿಜವಾದ ತಾಯಿ....ಈ ಸತ್ಯಸಂಗತಿಯನ್ನು ತಾನೇ ನೀನು ನಂದಿಯಲ್ಲಿದ್ದು ತಿಳಿದುಕೊಂಡು ಬಂದಿದ್ದು?’ ಪುರುಷೋತ್ತಮರು ಪ್ರಶ್ನಿಸಿದಾಗ ಋತು ಆಶ್ಚರ್ಯಚಕಿತಳಾದಳು.

ಆ ದಿನ ಧ್ಯಾನ ಮಂದಿರದಲ್ಲಿ ಅಪ್ಪಾಜಿಯಿಂದ ತಿಳಿದು ಬಂದ ಸತ್ಯ ಸಂಗತಿಗಳು ಅವು. ಆ ವಿಷಯ ಪಪ್ಪನಿಗೆ ತಿಳಿದದ್ದು ಹೇಗೆ? ಹಾಗಾದರೆ ತಮ್ಮನ್ನು ಹಿಂಬಾಲಿಸಿ ಬಂದ ಆ ಕಪ್ಪು ಬಣ್ಣದ ಕಾರು, ಬಿಡದೆ ತನ್ನ ನೆರಳಾಗಿ

